http://www.howtoexam.com

**DK 05**

## ಪಿ.ಯು.ಸಿ. ನಂತರದ ಕನ್ನಡ ಡಿಪ್ಲೋಮಾ ಪರೀಕ್ಷೆ, ಆಗಸ್ಟ್ 2009
## ಪತ್ರಿಕೆ – 5 : ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ) ಮತ್ತು ಕನ್ನಡ ಭಾಷೆಯ ಚರಿತ್ರೆ
## (ಹೊಸ ಪಠ್ಯಕ್ರಮ)

ಕಾಲ : 3 ಗಂಟೆಗಳು — ಗರಿಷ್ಠಾಂಕಗಳು : 100

### ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ) — (60 ಅಂಕಗಳು)

1. ಈ ಸೂತ್ರಗಳಲ್ಲಿ ಎರಡನ್ನು ಸೋದಾಹರಣವಾಗಿ ವಿವರಿಸಿ : **(2×5=10)**

1.1) ಕೊರಲುಂ ಜಿಹ್ವಾಮೂಲಮು
ಮುರಮುಂ ತಾಳುಗೆಯುಮೋಷ್ಠಮುಂ ನಾಸಿಕೆಯುಂ
ಶಿರಮುಂ ದಂತಮುಮೆಂದ
ಕ್ಕರಮುದಯಿಪ ತಾಣಮಾದುವೀ ಪೇೞ್ದೆಂಟುಂ

1.2) ಏಕದ್ವಿತ್ವಬಹುತ್ವಮ
ನೇಕದ್ವಿಬಹುತ್ವ ವಸ್ತುಗಳ್ಗಾಚರಿಪರ್
ಸ್ವೀಕಾರಂ ಕನ್ನಡದೊಳ
ಗೇಕಬಹುತ್ವಂ ದ್ವಿವಚನಮುಚಿತದೆ ಬರ್ಕುಂ

1.3) ಪಿಂತಮರ್ದಿರೆ ಱೞಕುಳರೇ
ಫಾಂತಂ ಹ್ರಸ್ವಾದಿಲಿಂಗಮಂತಾಗಳ್ ಮೇ
ಣಂತೆ ಚತುರ್ಥಿಯ ಗೆಯೆ ಮೇ
ಣ್ಮಂತಮರ್ದಿರೆ ಪಿರಿದುಮೊದವುಗುಂ ಶಿಥಿಲತ್ವಂ

1.4) ಸಂದಿಸಿ ಮಮಿಂಕೆಯದದೊ
ಳೈಂದಿರ್ಪುವು ಸಪ್ತವಿಧ ವಿಭಕ್ತಿಗಳವು ಮಾ
ರ್ಗಂದಪ್ಪದರ್ಥವಶದಿಂ
ಪಿಂದೆಣಿಸಿದ ವಿವಿಧ ವಿಧದ ಲಿಂಗಕ್ಕೆಲ್ಲಂ

2. ಈ ಸೂತ್ರ ವಾಕ್ಯಗಳಲ್ಲಿ **ನಾಲ್ಕನ್ನು** ವಿವರಿಸಿ : **($2\frac{1}{2}$×4=10)**

2.1) ಪಂಚವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ

2.2) ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಟ್ಪರ್

2.3) ಸತೃಣಾಭ್ಯವಹಾರಿಗಳುಸಿರ್ವರ್ ಗದ್ಯಕಾವ್ಯದೊಳ್ ನಿರ್ಬಂಧಂ ಪುಗದೆಂದು

2.4) ಗ್ರಾಮ್ಯರಱೞಯದುಚ್ಚರಿಸುವರ್ ಕುಳಾಂತ ಭ್ರಮೆಯಿಂ

2.5) ಸಂದ ಪಕಾರಕ್ಕೆ ಹಕಾರಂ ದೊರೆಕೊಳ್ಗುಂ ವಿಕಲ್ಪದಿಂ

2.6) ಯತಿವಿಲಂಘನದಿಂದರಿದಲ್ತೆ ಕನ್ನಡಂ

**P.T.O.**

Placement paper, University exam paper, entrance exam and school question paper

http://www.howtoexam.com



3. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : $(4\times2\frac{1}{2}=10)$

3.1) ಯೋಗವಾಹಗಳು

3.2) ಸಂಧಿದೋಷ

3.3) ವಚನ ಪಲ್ಲಟ

3.4) ಅರಿಸಮಾಸ

3.5) ಅವ್ಯಯ

3.6) ತತ್ಸಮ.

4. ನಾಲ್ಕರ ವ್ಯಾಕರಣ ವಿಶೇಷವನ್ನು ತಿಳಿಸಿ : $(4\times2\frac{1}{2}=10)$

4.1) ಆತನೆಯೆ ತೋರದೊಡೆಗಳ್

4.2) ತಿಳಿಗೊಳದಿಂದೆ ಪಾಱುದುವು ಹಂಸಕುಳಂ

4.3) ಈಂದ ಪುಲಿಯಾವೊಲಿರ್ದಳ್

4.4) ಆನೆಯೊ ಅದ್ರಿಯೊ !

4.5) ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೆ

4.6) ಕವಿಗೆ ಕವಿ ಮುನಿವಂ.

5. ಸಂಧಿ ಎಂದರೇನು ? ಸಂಧಿಯ ವಿಧಗಳನ್ನು ಸೋದಾಹರಣವಾಗಿ ವಿವರಿಸಿ. 10

**ಅಥವಾ**

'ನಾಲ್ವತ್ತೇೞಾಯ್ತಳೆ ಶುದ್ಧಗೆಯಚ್ಚಗನ್ನಡಕ್ಕೀಕ್ರಮದಿಂ' – ಈ ಹೇಳಿಕೆಯನ್ನು ವಿವರಿಸಿ.

6. ಇವುಗಳಿಗೆ ಉತ್ತರಿಸಿ : $(10\times1=10)$

6.1) ನಾಮಿ ಎಂದರೇನು ?

6.2) ಅರಿಸಮಾಸ ಎಂದರೇನು ?

6.3) 'ಚಾಕ್ಷುಷ' ಎಂದರೇನು ?

6.4) ಕಾರಕಗಳೆಷ್ಟು?

ಬಿಟ್ಟಿರುವ ಜಾಗವನ್ನು ಭರ್ತಿಮಾಡಿ :

6.5) _________ ಪ್ಲುತಮಕ್ಕುಂ ( ಏಕಮಾತ್ರಮಾದೊಡೆ, ದ್ವಿಮಾತ್ರಮಾದೊಡೆ, ತ್ರಿಮಾತ್ರಮಾದೊಡೆ )

6.6) ಕ್ರಿಯಾಪದದ ಮೂಲರೂಪ _________ (ಕಾರಕ, ಲಿಂಗ, ಧಾತು)

6.7) ಆದಿಯ ಪತ್ತಕ್ಕರಂ _________ ಮೆನಿಸುಗುಂ (ಸ್ವರಾಂಗ, ಸಂಧಿ, ದ್ವಿತ್ವ)

Placement paper, University exam paper, entrance exam and school question paper

http://www.howtoexam.com



ಸರಿಯೇ ತಪ್ಪೇ ತಿಳಿಸಿ :

6.8) ಮುಕ್ಕಣ ಎಂಬುದು ದ್ವಿಗು ಸಮಾಸ. (ಸರಿ/ತಪ್ಪು)

6.9) ಕನ್ನಡದಲ್ಲಿ ಮೂರು ವಚನಗಳಿವೆ. (ಸರಿ/ತಪ್ಪು)

6.10) ಸತಿ ಸಪ್ತಮಿ ಸಂಸ್ಕೃತದ ಅಸಾಧಾರಣ ಲಕ್ಷಣಗಳಲ್ಲೊಂದು. (ಸರಿ/ತಪ್ಪು)

## ಕನ್ನಡ ಭಾಷೆಯ ಚರಿತ್ರೆ (40 ಅಂಕಗಳು)

7. ಭಾಷೆ ಎಂದರೇನು ? ವಿವಿಧ ವಿದ್ವಾಂಸರ ಅಭಿಪ್ರಾಯಗಳೊಂದಿಗೆ ಚರ್ಚಿಸಿ. **10**

**ಅಥವಾ**

ಕನ್ನಡ ಭಾಷೆ ಸಂಸ್ಕೃತಜನ್ಯವೆ ? ವಿಚಾರ ಮಾಡಿ.

8. ಕನ್ನಡ ನಾಡು-ನುಡಿಯ ಪ್ರಾಚೀನತೆಯನ್ನು ಕುರಿತು ಬರೆಯಿರಿ. **10**

**ಅಥವಾ**

ಕನ್ನಡದ ವಿಭಕ್ತಿ ಪ್ರತ್ಯಯಗಳನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ವಿವೇಚಿಸಿ.

9. ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×5=10)**

9.1) ಮಹಾಪ್ರಾಣಾಕ್ಷರಗಳು

9.2) ಕನ್ನಡದಲ್ಲಿ ಪಂಚಮೀ ವಿಭಕ್ತಿ ಪ್ರತ್ಯಯ

9.3) ಕನ್ನಡದಲ್ಲಿ ಲಿಂಗ ವ್ಯವಸ್ಥೆ

9.4) ಸರ್ವನಾಮಗಳು.

10. ಐದನ್ನು ಕುರಿತು ಭಾಷಾಶಾಸ್ತ್ರದ ದೃಷ್ಟಿಯಿಂದ ಟಿಪ್ಪಣಿ ಬರೆಯಿರಿ : **(2×5=10)**

ಅಂಚೆ, ಎಳ್ಳೆಣ್ಣೆ, ಗುಂಡುಸೂಜಿ, ದೂರವಾಣಿ, ಹಣ್ಣುಹಂಪಲು, ಮೈಸೂರುಪಾಕ್, ಇಸ್ಕೂಲು, ಸೀರೆ, ರೈತ, ತಂಗುಳನ್ನ.

HowToExam.com

Placement paper, University exam paper, entrance exam and school question paper